ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸ್ಪೆಷಲ್ ಕೇಸ್ ನಂಬ್ರ 124/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಿ.ಆರ್. ನರೇಂದ್ರ | ಪ್ರಾಸಾಃ 5 |
| ತಂದೆಯ ಹೆಸರು | : | ಎ.ಸಿ. ರಾಜು | ಚಾಸಾಃ 9 |
| ಪ್ರಾಯ | : | 60 ವರ್ಷ | **ದಿನಾಂಕಃ 02.02.2023** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ನೌಕರ | |
| ವಾಸಸ್ಥಳ | : | ವಾಮಂಜೂರು, ಮಂಗಳೂರು. | |

ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ

ನಾನು 2005 ರಿಂದ 2018 ರ ವರೆಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಬೆಳ್ತಂಗಡಿಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 24.12.2016 ರಂದು ಎ,ಸಿ.ಬಿ.ಯ ಡಿ.ವೈ.ಎಸ್.ಪಿ.ರವರು ನಮ್ಮ ಕಛೇರಿಗೆ ಪತ್ರ ಬರೆದು ಗುರುವಾಯನಕೆರೆ ಎಂಬ ಸ್ಥಳದಲ್ಲಿ ಇದ್ದ ಕೊಳವೆ ಬಾವಿ ತೋಡಿಸಲು ಮತ್ತು ಪಂಪ್ ಶೆಡ್ ಕಟ್ಟಿಸಲು ಆದಂತಹ ಅಂದಾಜು ಖರ್ಚಿನ ವರದಿಯನ್ನು ನೀಡುವಂತೆ ಕೇಳಿದ್ದರು. ಆ ಪತ್ರ ಬಂದ ಸುಮಾರು 3 ತಿಂಗಳ ನಂತರ ನಾನು ಕೊಳವೆ ಬಾವಿ ಇದ್ದ ಸ್ಥಳಕ್ಕೆ ನನ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಂತಹ ಸಹಾಯಕ ಇಂಜಿನಿಯರ್ ಈತನೊಂದಿಗೆ ಹೋಗಿದ್ದೆನು. ಅಲ್ಲಿ ಒಂದು ಮನೆ ಇತ್ತು. ಆ ಮನೆಯಲ್ಲಿ 2 ಕೊಳವೆ ಬಾವಿಗಳು ಇದ್ದವು. ಆ ಮನೆಯಲ್ಲಿದ್ದ ಜನರು ನಮಗೆ ಕೊಳವೆ ಬಾವಿಗಳನ್ನು ತೋರಿಸಿದ್ದಾರೆ. ನಾನು ಕೊಳವೆ ಬಾವಿಗಳನ್ನು ಪರಿಶೀಲನೆ ಮಾಡಿದ್ದೇನೆ.

ಅಲ್ಲಿದ್ದ ಕೊಳವೆ ಬಾವಿಗಳಿಗೆ ಪ್ರತ್ಯೇಕವಾಗಿ 2 ಹೆಚ್.ಪಿ. ಮೋಟಾರುಗಳು ಇದ್ದವು.

3. ಒಂದು ಕೊಳವೆ ಬಾವಿಯ ಆಳ 166.65 ಮೀಟರ್ ಇತ್ತು. ಇನ್ನೊಂದು ಕೊಳವೆ ಬಾವಿಯ ಆಳ 69.15 ಮೀಟರ್ ಇತ್ತು. 2012-2013 ರ ಸಾಲಿನ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ದರಪಟ್ಟಿಗಳು ಇದ್ದವು. ಆ ದರಪಟ್ಟಿಗಳನ್ನು ಆಧರಿಸಿ ನಾನು ಕೊಳವೆ ಬಾವಿಗಳ ಅಂದಾಜು ಖರ್ಚನ್ನು ಕಂಡುಕೊಂಡಿದ್ದೇನೆ. ಮೊದಲನೇ ಕೊಳವೆ ಬಾವಿಯ ಕೊರೆಸುವ ಖರ್ಚು ರೂ.85,980/- ಆಗುತ್ತದೆ. ಎರಡನೇ ಕೊಳವೆ ಬಾವಿಯನ್ನು ಕೊರೆಸುವ ಖರ್ಚು ರೂ.50,191/- ಆಗುತ್ತದೆ. ಮೊದಲನೇ ಕೊಳವೆ ಬಾವಿಯ ಮೋಟಾರಿನ ಬೆಲೆ ರೂ.55,786/- ಆಗುತ್ತಿತು. ಎರಡನೇ ಮೋಟಾರಿನ ಬೆಲೆ ರೂ.49,225/- ಆಗುತ್ತಿತ್ತು. ಆ ಪ್ರಕಾರ ನಾನು 2 ಕೊಳವೆ ಬಾವಿಗಳ ಅಂದಾಜುಪಟ್ಟಿಯನ್ನು ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಆ ಪಟ್ಟಿಗಳನ್ನು ಕ್ರಮವಾಗಿ ನಿಶಾನೆ ಪಿ35 ಮತ್ತು ನಿಶಾನೆ ಪಿ-36 ಹಾಗೂ ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ35(ಎ) ಮತ್ತು ನಿಪಿ-36(ಎ) ಎಂದು ಗುರುತಿಸಲಾಯಿತು. ಎರಡು ಪಂಪ್ ಶೆಡ್ ಗಳ ಅಂದಾಜು ಪಟ್ಟಿಯನ್ನು ಸಹ ನೀಡಿದ್ದೇನೆ. ಸಾಕ್ಷಿ ಗುರುತಿಸಿದ ಆ ಪಟ್ಟಿಗಳನ್ನು ಕ್ರಮವಾಗಿ ನಿಶಾನೆ ಪಿ37 ಮತ್ತು ನಿಶಾನೆ ಪಿ-38 ಹಾಗೂ ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ37(ಎ) ಮತ್ತು ನಿಪಿ-38(ಎ) ಎಂದು ಗುರುತಿಸಲಾಯಿತು. ಈ ವರದಿಗಳನ್ನು ನಾನು ಪೊಲೀಸರಿಗೆ ದಿನಾಲಂಕ 17.03.2017 ರ ಪತ್ರದೊಂದಿಗೆ ರವಾನಿಸಿರುತ್ತೇನೆ ಸಾಕ್ಷಿ ಗುರುತಿಸಿದ ಆ ಪತ್ರವನ್ನು ನಿಶಾನೆ ಪಿ-39 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-39(ಎ) ಎಂದು ಗುರುತಿಸಲಾಯಿತು.

4. ನಾನು 2012 ಮತ್ತು 2013ರ ಎಸ್.ಆರ್. ದರಗಳನ್ನು ಯಾವ ಕಾರಣಕ್ಕಾಗಿ ಅಳವಡಿಸಿ ಅಂದಾಜು ಪಟ್ಟಿಗಳನ್ನು ತಯಾರಿಸಿದ್ದೇನೆ ಎಂಬುದು ಈಗ ನೆನಪಿಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

5. ಮೋಟಾರುಗಳು ಬೇರೆ ಬೇರೆ ಕಂಪನಿಯ ಮೋಟಾರುಗಳಾಗಿದ್ದವು. ಕೊಳವೆ ಬಾವಿಗಳನ್ನು ತೋಡಿಸಲು ಬೇರೆ ಬೇರೆ ಸಂಸ್ಥೆಯ ವಾಹನಗಳು ಇರುತ್ತವೆ ಅಂದರೆ ಸರಿ. ಆ ಎರಡೂ ಕೊಳವೆ ಬಾವಿಗಳನ್ನು ಯಾವ ಸಂಸ್ಥೆಯ ವಾಹನಗಳು ತೋಡಿದ್ದವು ಎಂಬುದನ್ನು ನಾನು ಮನೆಯವರನ್ನು ವಿಚಾರಣೆ ಮಾಡಿಲ್ಲ. ಮೋಟಾರುಗಳನ್ನು ಪೂರೈಸಿದಂತಹ ಸಂಸ್ಥೆಗಳು ಯಾವುವು ಎಂಬುದನ್ನು ನಾನು ವಿಚಾರಣೆ ಮಾಡಿಲ್ಲ. ನಾನು ಮನೆಯಲ್ಲಿದ್ದ ಜನರಿಂದ ಕೊಳವೆ ಬಾವಿ ಮತ್ತು ಮೋಟಾರುಗಳಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ. ಕೊಳವೆ ಬಾವಿಗಳನ್ನು ಯಾವ ವರ್ಷ ತೋಡಿಸಲಾಗಿದೆ ಎಂಬುದನ್ನು ನಾನು ವರದಿಗಳಲ್ಲಿ ಕಾಣಿಸಿಲ್ಲ.

6. ನಮ್ಮ ಇಲಾಖೆಯಿಂದ ಎಸ್.ಆರ್. ದರಗಳನ್ನು ಒಮ್ಮೊಮ್ಮೆ ಪ್ರತೀ ವರ್ಷ ನಿಗದಿಪಡಿಸುತ್ತಾರೆ ಹಾಗೂ ಒಮ್ಮೊಮ್ಮೆ ಎರಡು ವರ್ಷಗಳಿಗೊಮ್ಮೆ ನಿಗದಿ ಮಾಡುತ್ತಾರೆ. ಪ್ರತೀ ವರ್ಷದ ದರಗಳು ಹೊಸ ವರ್ಷಕ್ಕೆ ಪ್ರತಿಶತ 10 ರಷ್ಟು ದರಗಳು ಹೆಚ್ಚಾಗುತ್ತವೆ ಅಂದರೆ ಸಾಕ್ಷಿ ಒಮ್ಮೊಮ್ಮೆ ಹೆಚ್ಚಾಗುತ್ತವೆ ಮತ್ತು ಒಮ್ಮೊಮ್ಮೆ ಹಳೆ ದರಗಳು ಮುಂದುವರೆಯುತ್ತವೆ ಎಂದು ಹೇಳುತ್ತಾರೆ.

7. ನಿಪಿ-35 ರಲ್ಲಿ ಕಾಣಿಸಿದಂತಹ ಕೊಳವೆ ಬಾವಿಯನ್ನು 2003 ರಲ್ಲಿ ತೋಡಿಸಲಾಗಿದೆ ಅಂದರೆ ಇರಬಹುದು. ನಿಪಿ-36 ರಲ್ಲಿ ಕಾಣಿಸಿದಂತಹ ಕೊಳವೆ ಬಾವಿಯನ್ನು 2014 ರಲ್ಲಿ ತೋಡಿಸಲಾಗಿದೆ ಅಂದರೆ ಇರಬಹುದು. 2003 ರ ದರ ಪಟ್ಟಿಗಳಂತೆ ನಿಪಿ-35 ರಲ್ಲಿ ಕಾಣಿಸಿದ ಕೊಳವೆ ಬಾವಿ ಮತ್ತು ಅದಕ್ಕೆ ಜೋಡಿಸಲಾದ ಪಂಪ್ ಶೆಡ್ ನ ಅಂದಾಜು ಪಟ್ಟಿಯನ್ನು ತಯಾರಿಸಿದರೆ ಕಡಿಮೆ ಖರ್ಚು ಬರುತ್ತದೆ ಅಂದರೆ ಸರಿ. ಕೊಳವೆ ಬಾವಿಗಳನ್ನು ತೋಡಿಸಿದ ವರ್ಷ ಕಂಡುಕೊಂಡರೆ ಮಾತ್ರ ಅದಕ್ಕೆ ತಗುಲಿದ ವೆಚ್ಚವನ್ನು ಅಂದಾಜಿಸಬಹುದು ಅಂದರೆ ಸರಿ. ನಿಪಿ-35 ರಲ್ಲಿ ಕಾಣಿಸಿದ ಕೊಳವೆ ಬಾವಿ ಕೊರೆಸಲು ಮತ್ತು ಅದಕ್ಕೆ ಪಂಪ್ ಶೆಡ್ ಅಳವಡಿಸಲು ರೂ.60,000/- ವೆಚ್ಚ ಆಗಿದೆ ಅಂದರೆ ಇರಬಹುದು. ನಿಪಿ-36 ರಲ್ಲಿ ಕಾಣಿಸಿದ ಕೊಳವೆ ಬಾವಿ ಕೊರೆಸಲು ಮತ್ತು ಅದಕ್ಕೆ ಪಂಪ್ ಶೆಡ್ ಅಳವಡಿಸಲು ರೂ.75,000/- ವೆಚ್ಚ ಆಗಿದೆ ಅಂದರೆ ಇರಬಹುದು.

8. ನಮ್ಮ ಇಲಾಖೆಯ ದರಪಟ್ಟಿಗಳಿಗಿಂತ ಕಡಿಮೆ ದರಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಸಬಹುದು ಮತ್ತು ಪಂಪ್ ಶೆಡ್ ಗಳನ್ನು ಅಳವಡಿಸಬಹುದು ಅಂದರೆ ನನಗೆ ಗೊತ್ತಿರುವುದಿಲ್ಲ. ನಾನು ಲೋಕಾಯುಕ್ತ ಪೊಲೀಸರ ಹೇಳಿಕೆಯ ಮೇರೆಗೆ ನನ್ನ ವರದಿಗಳಲ್ಲಿ ಹೆಚ್ಚು ವೆಚ್ಚಗಳನ್ನು ಕಾಣಿಸಿದ್ದೇನೆ ಅಂದರೆ ಸರಿಯಲ್ಲ.

9. ನಿಪಿ-39 ರಲ್ಲಿ ನಾನು ಪ್ರಸಕ್ತ ಚಾಲ್ತಿಯಲ್ಲಿರುವ ದರಪಟ್ಟಿಯಂತೆ ಎಂದು ಕಾಣಿಸಿದ್ದೇನೆ ಅಂದರೆ ಸರಿ. ಅದರ ಅರ್ಥ ನಾನು ನಿಪಿ-35 ರಿಂದ ನಿಪಿ-38 ರಲ್ಲಿರುವ ಅಂದಾಜುಪಟ್ಟಿಗಳನ್ನು 2017 ರ ಎಸ್.ಆರ್. ದರಗಳನ್ನಾಧರಿಸಿ ಅಂದಾಜುಪಟ್ಟಿ ತಯಾರಿಸಿದ್ದೇನೆ ಎಂದು ತಿಳಿದುಕೊಳ್ಳಬೇಕಾಗುತ್ತದೆ ಅಂದರೆ ಸರಿ.

ನ್ಯಾಯಾಲಯದ ಪ್ರಶ್ನೆಃ 2012-2013 ರ ಎಸ್.ಆರ್. ದರಗಳು 2017 ರ ವರೆಗೆ ಚಾಲ್ತಿಯಲ್ಲಿದ್ದವೋ ಅಥವಾ ಬದಲಾವಣೆ ಆಗಿದ್ದವೋ?
ಉತ್ತರಃ ನೆನಪಿಲ್ಲ.

(ಸಾಕ್ಷಿಗೆ 2012-2013 ರ ದರಪಟ್ಟಿ ಮತ್ತು 2017 ರಲ್ಲಿ ದರಪಟ್ಟಿ ಬದಲಾವಣೆ ಆಗಿದ್ದರೆ ಆ ದರಪಟ್ಟಿಗಳು ಬದಲಾವಣೆ ಆಗಿದ್ದರೆ ಆ ದರಪಟ್ಟಿಗಳನ್ನು ಒಂದು ತಿಂಗಳ ಒಳಗೆ ನ್ಯಾಯಾಲಯದಲ್ಲಿ ಹಾಜರುಪಡಿಸುವಂತೆ ಸೂಚಿಸಲಾಗಿದೆ.)

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.